ಸಾಕ್ಷಿಯನ್ನು ದಿನಾಂಕಃ 27/02/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- ಪ್ರತಿವಾದಿ ನಂ.5 ರ ಪರ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಪ್ರತಿವಾದಿ ನಂ.6 ಇರುತ್ತೇನೆ. ನಾನು ಇಂದು ಮುಖ್ಯ ವಿಚಾರಣೆಯ ಹೇಳಿಕೆಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಲ್ಲಿದ್ದೇನೆ, ಸದರಿ ಪ್ರಮಾಣ ಪತ್ರದಲ್ಲಿ ಇರುವಂತಹ ಮಾಹಿತಿಗಳು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದ್ದು ಅದರಲ್ಲಿ ಬರೆದಂತಹ ಎಲ್ಲ ಮಾಹಿತಿಗಳು ನಿಜವಿರುತ್ತದೆ ಎಂದು ತಿಳಿದು ನಾನು ನನ್ನ ಸಹಿ ಮಾಡಿರುತ್ತೇನೆ.

**ಮುಂದಿನ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳಿರುತ್ತಾರೆ**

**ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ**

ವಾದಿಗಳು ಮಾತ್ರ ಬಸವರಾಜ ಕಪ್ಪಲಿ ರವರ ಸರಳ ವಾರಸುದಾರರು. ಆದ್ದರಿಂದ ಅವರ ಎಲ್ಲಾ ಆಸ್ತಿಗೆ ಮತ್ತು ಅವರ ಮರಣೋತ್ತರ ಹಣಕ್ಕೆ ಅವರೆ ವಾರಸುದಾರರು ಆಗುತ್ತಾರೆ ಎಂದರೆ ಸಾಕ್ಷಿ ನಾವು ಸಹ ವಾರಸುದಾರರು ಮತ್ತು ಆಸ್ತಿ ಮತ್ತು ಹಣದಲ್ಲಿ ನಮಗೂ ಪಾಲು ಇದೆ ಎಂದು ಹೇಳುತ್ತಾರೆ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಪ್ರತಿವಾದಿ ನಂ.8 ರಿಂದ 10 ರ ಪರ ವಕೀಲರನ್ನು ನ್ಯಾಯಾಲಯಲ್ಲಿ ಕೂಗಿ ಕರೆಸಲಾಗಿ, ಗೈರು ಹಾಜರು ಆಗಿರುವುದರಿಂದ, ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
27.02.2025

**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**

ಸಾಕ್ಷಿಯನ್ನು ದಿನಾಂಕಃ 27/02/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- ಪ್ರತಿವಾದಿ ನಂ.5 ರ ಪರ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಪ್ರತಿವಾದಿ ನಂ.5 ಇರುತ್ತೇನೆ. ನಾನು ಇಂದು ಮುಖ್ಯ ವಿಚಾರಣೆಯ ಹೇಳಿಕೆಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಲ್ಲಿದ್ದೇನೆ, ಸದರಿ ಪ್ರಮಾಣ ಪತ್ರದಲ್ಲಿ ಇರುವಂತಹ ಮಾಹಿತಿಗಳು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದ್ದು ಅದರಲ್ಲಿ ಬರೆದಂತಹ ಎಲ್ಲ ಮಾಹಿತಿಗಳು ನಿಜವಿರುತ್ತದೆ ಎಂದು ತಿಳಿದು ನಾನು ನನ್ನ ಸಹಿ ಮಾಡಿರುತ್ತೇನೆ.

**<u>ನಾನು ಇಂದು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ</u>**

ಅಜಯಕುಮಾರ ರವರ ಎಸ್ ಎಸ್ ಎಲ್ ಸಿ ಮಾರ್ಕ್ಸ ಕಾರ್ಡನ್ನು ನಿಡಿಃ 1 ಎಂದು, ಅಜಯಕುಮಾರ ರವರ ಜನ್ಮ ದಾಖಲಾತಿ ಪ್ರಮಾಣ ಪತ್ರವನ್ನು ನಿಡಿಃ 2 ಎಂದು, ಮೋಹನ ಕುಮಾರ ರವರ ಸ್ಟಡಿ ಸರ್ಟಿಫಿಕೇಟ್ ನ್ನು ನಿಡಿಃ 3 ಎಂದು, ಅಜಯಕುಮಾರ ರವರ ಆಧಾರ ಕಾರ್ಡನ್ನು ನಿಡಿಃ 4 ಎಂದು, ಮೋಹನ ಕುಮಾರ ರವರ ಚುನಾವಣಾ ಗುರುತಿನ ಚೀಟಿಯನ್ನು ನಿಡಿಃ 5 ಎಂದು, ಅಜಯ ಕುಮಾರ ರವರ ಚುನಾವಣಾ ಗುರುತಿನ ಚೀಟಿಯನ್ನು ನಿಡಿಃ 6 ಎಂದು, ನೀಲಾಂಬಿಕಾ ರವರ ಆಧಾರ ಕಾರ್ಡನ್ನು ನಿಡಿಃ 7 ಎಂದು, ನೀಲಾಂಬಿಕಾ ರವರ ಗುರುತಿನ ಚೀಟಿಯನ್ನು ನಿಡಿಃ 8 ಎಂದು, 8 ಫೋಟೋಗಳನ್ನು ಒಟ್ಟಾಗಿ ನಿಡಿಃ 9 ಎಂದು ಗುರುತಿಸಲಾಯಿತು.

**ಮುಂದಿನ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳಿರುತ್ತಾರೆ**

**ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ**

1 ನೇ ವಾದಿ ಬಸವರಾಜ ರವರ ಅತ್ತೆಯ ಮಗಳು ಎಂದರೆ ಸರಿ. 1 ನೇ ವಾದಿ ಬಸವರಾಜ ರವರ ಕಾನೂನು ಬದ್ಧ ಹಾಗೂ ಮೊದಲನೆ ಹೆಂಡತಿ ಎಂದರೆ ಸರಿ. 1 ನೇ ವಾದಿ ಬಸವರಾಜನ ಮೇಲೆ 2 ನೇ ಜೆ ಎಮ್ ಎಫ್ ಸಿ ನ್ಯಾಯಾಲಯದ ಗದಗದಲ್ಲಿ ಜೀವನಾಂಶ

ಕೋರಿ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ನ್ಯಾಯಾಲಯದಿಂದ ನೋಟಿಸು ಬಂದಾಗ ನೀವು ಸಹ ನ್ಯಾಯಾಲಯದಲ್ಲಿ ಹಾಜರಾಗಿದ್ದೀರಿ ಎಂದರೆ ಸರಿ. ಸದರಿ ನ್ಯಾಯಾಲಯದಲ್ಲಿ ಬಸವರಾಜ ರವರು ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಿದ್ದರು ಎಂದರೆ ಸರಿ. ನ್ಯಾಯಾಲಯದ ಆದೇಶದಂತೆ ಬಸವರಾಜ ರವರು ವಾದಿಗೆ ಜೀವನಾಂಶ ಕೊಡುತ್ತಿದ್ದರು ಎಂದರೆ ಸರಿ. ಬಸವರಾಜ ಮತ್ತು 1 ನೇ ವಾದಿಯ ದಾಂಪತ್ಯದ ಫಲವಾಗಿ ವಾದಿ ನಂ.2 ಮತ್ತು 3 ಜನಿಸಿದ್ದಾರೆ ಎಂದರೆ ಸರಿ. ಬಸವರಾಜ ರವರು 8 ನೇ ಪ್ರತಿವಾದಿಯನ್ನು ಲಗ್ನ ಆಗಿಲ್ಲ ಎಂದರೆ ಸರಿ. ಸದರಿ 8 ನೇ ಪ್ರತಿವಾದಿ ಮತ್ತು ಬಸವರಾಜನ ಸಂಬಂಧವಾಗಿ 9 ಮತ್ತು 10 ಪ್ರತಿವಾದಿಗಳು ಜನಿಸಿಲ್ಲ ಎಂದರೆ ಸರಿ. ಬಸವರಾಜ ರವರ ಆಸ್ತಿ ಮತ್ತು ಅವರ ಮರಣೋತ್ತರ ಸರ್ಕಾರದ ಸೌಲಭ್ಯ ಮತ್ತು ಪಿಂಚಣಿ ಮತ್ತು ಇತರೆ ಹಣಕ್ಕೆ ವಾದಿಗಳು ಮಾತ್ರ ಹಕ್ಕುದಾರರು ಎಂದರೆ ಸಾಕ್ಷಿ ನನ್ನ ಮಕ್ಕಳು ಸಹ ಹಕ್ಕುದಾರರು ಆಗುತ್ತಾರೆ ಎಂದು ಹೇಳುತ್ತಾರೆ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಪ್ರತಿವಾದಿ ನಂ.8 ರಿಂದ 10 ರ ಪರ ವಕೀಲರನ್ನು ನ್ಯಾಯಾಲಯಲ್ಲಿ ಕೂಗಿ ಕರೆಸಲಾಗಿ, ಗೈರು ಹಾಜರು ಆಗಿರುವುದರಿಂದ, ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
27.02.2025

**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**